**ಹಂತ : 5(ಎ).** 

# ನೀಲ ನಕಾಶೆ ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ
## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | ಗ್ರಹಿಕೆ | | | ಅಭಿವ್ಯಕ್ತಿ | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ಕಿ. ಉ. 1 | ಕಿ. ಉ. 2 | ದೀ ಉ. 1 | ಕಿ. ಉ. 2 | ದೀ ಉ. 1 | ದೀ ಉ. 2 | ಕಿ. ಉ. 1 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ ಉ. 2 | | | |
| 1 | ಹೂವಾದ ಹುಡುಗಿ | ** | 1(1) | ** | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| 2 | ತಲಕಾಡಿನ ವೈಭವ | ** | 1(1) | ** | ** | ** | 1(2) | ** | ** | ** | ** | 1(1) | 1(2) | ** | ** | ** | 3 | 2 |
| 3 | ಅಮ್ಮ | ** | ** | ** | ** | ** | ** | 1(3) | ** | ** | ** | ** | ** | 1(3) | ** | ** | 3 | 1 |
| 4 | ಸಪ್ತಾಕ್ಷರಿ ಮಂತ್ರ | ** | 1(1) | ** | 1(2) | ** | ** | | ** | ** | ** | 1(1) | 1(2) | ** | ** | ** | 3 | 2 |
| | **ಗದ್ಯ ಒಟ್ಟು** | ** | **3(1)** | ** | **2(2)** | ** | **1(2)** | **1(3)** | ** | ** | ** | **3(1)** | **3(2)** | **1(3)** | ** | ** | **12** | **7** |
| 1 | ಬಹುಮಾನ | ** | ** | 1(1) | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| 2 | ಗೆಳೆತನ | ** | ** | 1(1) | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| 3 | ವಚನಾಮೃತ | ** | ** | 1(1) | ** | ** | ** | ** | ** | 1(2) | ** | 1(1) | 1(2) | ** | ** | ** | 3 | 2 |
| 4 | ರಾಮಧಾನ್ಯ ಚರಿತೆ | ** | 1(1) | ** | ** | ** | 1(2) | ** | ** | ** | ** | 1(1) | 1(2) | ** | ** | ** | 3 | 2 |
| | **ಪದ್ಯ ಒಟ್ಟು** | ** | **1(1)** | **3(1)** | **2(2)** | ** | **1(2)** | ** | ** | **1(2)** | ** | **4(1)** | **4(2)** | ** | ** | ** | **12** | **8** |
| 1 | ಕಟ್ಟುವೆವು ನಾವು | ** | ** | ** | 1(2) | ** | ** | ** | ** | ** | ** | ** | 1(2) | ** | ** | ** | 2 | 1 |
| 2 | ಸೀಮೆ | ** | ** | ** | 1(2) | ** | ** | ** | ** | ** | ** | ** | 1(2) | ** | ** | ** | 2 | 1 |
| | **ಪಠ್ಯಪೋಷಕ ಅಧ್ಯಯನ** | ** | ** | ** | **2(2)** | ** | ** | ** | ** | ** | ** | ** | **2(2)** | ** | ** | ** | **4** | **2** |
| 5 | ಪತ್ರ / ಪ್ರಬಂಧ ಲೇಖನ | ** | ** | ** | ** | ** | ** | ** | 1(4) | ** | ** | ** | ** | ** | 1(4) | ** | 4 | 1 |
| 6 | ವ್ಯಾಕರಣ | 8(1) | ** | ** | ** | ** | ** | ** | ** | ** | 8(1) | ** | ** | ** | ** | ** | 8 | 8 |
| | **ಒಟ್ಟು** | 8(1) | ** | ** | ** | ** | ** | ** | 1(4) | ** | 8(1) | ** | ** | ** | ** | ** | **12** | **9** |
| | **ಸಮಗ್ರ ಒಟ್ಟು** | **8(1)** | **4(1)** | **3(1)** | **6(2)** | ** | **2(2)** | **1(3)** | **1(4)** | **1(2)** | **8(1)** | **7(1)** | **9(2)** | **1(3)** | **1(4)** | | **40** | **26** |
| | | **12** | | **15** | | | **11** | | | **2** | **40** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ

## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : 1.30 ಗಂಟೆಗಳು** **ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 4*1=4**

1. ಇವುಗಳಲ್ಲಿ ಅಂಕಿತನಾಮಕ್ಕೆ ಉದಾಹರಣೆಯಾದ ಪದವಿದು;
   (ಅ) ಕಾವೇರಿ (ಆ) ಮನುಷ್ಯ (ಇ) ವಿದ್ವಾಂಸ (ಈ) ಹೊಸದು
2. ವಿದ್ಯಾರ್ಥಿಗಳು ಕನ್ನಡ ಪಾಠವನ್ನು ಓದಿದರು. – ಈ ವಾಕ್ಯದಲ್ಲಿರುವ ಕರ್ಮಪದವಿದು;
   (ಅ) ವಿದ್ಯಾರ್ಥಿಗಳು (ಆ) ಕನ್ನಡ (ಇ) ಪಾಠವನ್ನು (ಈ) ಓದಿದರ.
3. ನಮ್ಮ ಊರಿನಲ್ಲಿ ಹುಲಿಗಳ ಕಾಟ ಬಹಳವಿತ್ತು. – ಈ ವಾಕ್ಯವು;
   (ಅ) ಸಾಮಾನ್ಯವಾಕ್ಯ (ಆ) ಸಂಯೋಜಿತವಾಕ್ಯ (ಇ) ಮಿಶ್ರವಾಕ್ಯ (ಈ) ಪ್ರಶ್ನಾರ್ಥಕ ವಾಕ್ಯ
4. 'ಹೆಮ್ಮರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಅ) ತತ್ಪುರುಷ (ಆ) ಕರ್ಮಧಾರಯ (ಇ) ದ್ವಂದ್ವ (ಈ) ಗಮಕ

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. 4*1 = 4**

5. ರವ : ನೀರವ : : ಭಯ : ______________________
6. ಕಬ್ಬ : ಕಾವ್ಯ : : ಸಕ್ಕರೆ : ________________
7. ಕ್ಷಿತಿ : ಭೂಮಿ : : ವಿರಂಚಿ : ______________
8. ಮನೆಯಲ್ಲಿ : ಆಗಮ ಸಂಧಿ : : ಹುಲ್ಲುಗಾವಲು : ________________

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. 7*1=7**

9. ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗನು ಯಾರ ಬಳಿಯಲ್ಲಿ ಹೇಳಿದನು?
10. ಗಂಗರ ಮೊದಲ ರಾಜಧಾನಿ ಯಾವುದು?
11. ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರೇನು?
12. ಮನುಷ್ಯನ ಮಾತಿಗೆ ಕೋಗಿಲೆಯು ಕೊಟ್ಟ ಉತ್ತರವೇನು?
13. ಗೆಳೆತನದ ಮನಸ್ಸಿನ ಭಾವನೆಯು ಹೇಗಿದೆ?
14. ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ಹೇಗೆ ಬುದ್ಧಿಯನ್ನು ಹೇಳಬೇಕಿದೆ?
15. ಕನಕದಾಸರ ಅವರ ಕಾಲ ಮತ್ತು ಸ್ಥಳ ತಿಳಿಸಿ.

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. 5*2=10**

16. ದೊರೆಯ ಮಗನು ದೇಶಾಂತರ ಹೋಗಲು ಕಾರಣವೇನು?
17. ತನ್ನ ಆಶ್ರಮಕ್ಕೆ ಬಂದ ಅತಿಥಿಗಳನ್ನು ಅರಣ್ಯಕನು ಹೇಗೆ ಸತ್ಕರಿಸಿದನು?
18. ಕೋಗಿಲೆಯ ಗಾನಕ್ಕೆ ಪ್ರಕೃತಿಯು ಹೇಗೆ ಸ್ಪಂದಿಸಿತು?
19. ಹೊಸನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?
20. ತಿಮ್ಮರಾಯನಿಗೆ ಮುದುಕಿಯು ವಿಧಿಸಿದ ಸೀಮೆಗಳನ್ನು ತಿಳಿಸಿ.

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ. 2*2=4**

21. "ಅದು ಕಲಾಶ್ರೀ ವಿಹರಿಸುವ ನಂದನವನ"
22. "ನಮ್ಮಯ ದೇಶಕತಿಶಯ ನರೆದಲೆಗ"

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

23. ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
______________________________
______________________________ ॥
______________________________
______________________________
ಉಂಡವನು ಕಂಡಿಹನು ಇದರ ಹದನು.

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

24. ಕಾಯಕದಲ್ಲಿ ನಿರತನಾದಡೆ
ಗುರುದರ್ಶನವಾದಡೂ ಮರೆಯಬೇಕು;
ಲಿಂಗಪೂಜೆಯಾದಡೂ ಮರೆಯಬೇಕು;
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು;
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಯಿತ್ತದಡೂ ಕಾಯಕದೊಳಗು ॥

**ಕೊಟ್ಟಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ ಸುಮಾರು ಆರು/ಏಳು ವಾಕ್ಯಗಳಲ್ಲಿ ಉತ್ತರಿಸಿರಿ.** **1*3=3**

25. ಮಲೆನಾಡಿನಲ್ಲಿ ಹುಲಿಗಳಿಂದಾಗುತ್ತಿದ್ದ ತೊಂದರೆಗಳನ್ನು ಹೇಗೆ ವರ್ಣಿಸಲಾಗಿದೆ?
ಅಥವಾ
'ಒರಿಜಿನಲ್' ಹಾಗೂ ಚರಟದ ಕಾಫಿಯನ್ನು ಸಿದ್ಧಗೊಲಿಸುತ್ತಿದ್ದ ಬಗೆಯನ್ನು ಬರೆಯಿರಿ.

**ಕೊಟ್ಟಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ ಉತ್ತರಿಸಿರಿ.** **1*4=4**

**26. ನಿಮ್ಮ ಶಾಲೆಯ ಪ್ರತಿಭಾ ಕಾರಂಜಿಗೆ ಕಾರ್ಯಕ್ರಮಕ್ಕೆ ಆಗಮಿಸುವಂತೆ ತಿಳಿಸಿ, ತಾಯಿಗೆ ಪತ್ರವನ್ನು ಬರೆಯಿರಿ.**

**ಅಥವಾ**

**ಕೊಟ್ಟಿರುವ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

* ರಾಷ್ಟ್ರೀಯ ಹಬ್ಬಗಳು
* ನಾನು ಮೆಚ್ಚಿದ ಪುಸ್ತಕ

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ

## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 4*1=4**

1. ಇವುಗಳಲ್ಲಿ ಅಂಕಿತನಾಮಕ್ಕೆ ಉದಾಹರಣೆಯಾದ ಪದವಿದು;
   (ಅ) ಕಾವೇರಿ (ಆ) ಮನುಷ್ಯ (ಇ) ವಿದ್ವಾಂಸ (ಈ) ಹೊಸದು
   **ಉತ್ತರ : (ಅ) ಕಾವೇರಿ**
2. ವಿದ್ಯಾರ್ಥಿಗಳು ಕನ್ನಡ ಪಾಠವನ್ನು ಓದಿದರು. – ಈ ವಾಕ್ಯದಲ್ಲಿರುವ ಕರ್ಮಪದವಿದು;
   (ಅ) ವಿದ್ಯಾರ್ಥಿಗಳು (ಆ) ಕನ್ನಡ (ಇ) ಪಾಠವನ್ನು (ಈ) ಓದಿದರು
   **ಉತ್ತರ : (ಇ) ಪಾಠವನ್ನು**
3. ನಮ್ಮ ಊರಿನಲ್ಲಿ ಹುಲಿಗಳ ಕಾಟ ಬಹಳವಿತ್ತು. – ಈ ವಾಕ್ಯವು;
   (ಅ) ಪ್ರಶ್ನಾರ್ಥಕ ವಾಕ್ಯ (ಆ) ಸಂಯೋಜಿತ ವಾಕ್ಯ (ಇ) ಮಿಶ್ರ ವಾಕ್ಯ (ಈ) ಸಾಮಾನ್ಯ ವಾಕ್ಯ
   **ಉತ್ತರ : (ಈ) ಸಾಮಾನ್ಯವಾಕ್ಯ**
4. **'ಹೆಮ್ಮರ'** ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಅ) ತತ್ಪುರುಷ (ಆ) ಕರ್ಮಧಾರಯ (ಇ) ದ್ವಂದ್ವ (ಈ) ಗಮಕ
   **ಉತ್ತರ : (ಆ) ಕರ್ಮಧಾರಯ**

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. 4*1 = 4**

5. ರವ : ನೀರವ : : ಭಯ : **ನಿರ್ಭಯ / ಅಭಯ**
6. ಕಬ್ಬ : ಕಾವ್ಯ : : ಸಕ್ಕರೆ : **ಶರ್ಕರಾ**
7. ಕ್ಷಿತಿ : ಭೂಮಿ : : ವಿರಂಚಿ : **ಬ್ರಹ್ಮ**
8. ಮನೆಯಲ್ಲಿ : ಆಗಮ ಸಂಧಿ : : ಹುಲ್ಲುಗಾವಲು : **ಆದೇಶ ಸಂಧಿ**

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. 7*1=7**

9. **ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗನು ಯಾರ ಬಳಿಯಲ್ಲಿ ಹೇಳಿದನು?**
   ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗನು ಮಂತ್ರಿಯ ಮಗನ ಬಳಿ ಹೇಳಿದನು.
10. **ಗಂಗರ ಮೊದಲ ರಾಜಧಾನಿ ಯಾವುದು?**
    ಗಂಗರ ಮೊದಲ ರಾಜಧಾನಿ **ಕೋಲಾರ**.
11. **ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರೇನು?**
    ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರು **'ಸಪ್ತಾಕ್ಷರೀ ಮಂತ್ರ'**.
12. **ಮನುಷ್ಯನ ಮಾತಿಗೆ ಕೋಗಿಲೆಯು ಕೊಟ್ಟ ಉತ್ತರವೇನು?**
    ಮನುಷ್ಯನ ಮಾತಿಗೆ ಕೋಗಿಲೆಯು **'ಕುಹೂ! ಕುಹೂ!'** ಎಂದು ಉತ್ತರ ಕೊಟ್ಟಿತು.
13. **ಗೆಳೆತನದ ಮನಸ್ಸಿನ ಭಾವನೆಯು ಹೇಗಿದೆ?**
    ಗೆಳೆತನದ ಮನಸ್ಸಿನ ಭಾವನೆಯು **ಬಾನಿನಷ್ಟು ಅಗಲವಾಗಿ, ಎದೆ ತಿಳಿಯಾದ ಕೊಳದಂತೆ, ಭಾವವು ಶುದ್ಧ ಸ್ಫಟಿಕ ಬೆಳದಿಂಗಳಿನಂತೆ** ಇದೆ.
14. **ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ಹೇಗೆ ಬುದ್ಧಿಯನ್ನು ಹೇಳಬೇಕಿದೆ?**
    ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ವಂದಿಸಿ ಬುದ್ಧಿಯನ್ನು ಹೇಳಬೇಕಿದೆ.
15. **ಕನಕದಾಸರ ಅವರ ಕಾಲ ಮತ್ತು ಸ್ಥಳ ತಿಳಿಸಿ.**
    ಶ್ರೀ ಕನಕದಾಸರು ಕ್ರಿ. ಶ. ಸುಮಾರು 1508 ರಲ್ಲಿ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು.

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. 5*2=10**

16. **ದೊರೆಯ ಮಗನು ದೇಶಾಂತರ ಹೋಗಲು ಕಾರಣವೇನು?**
    ದೊರೆಯ ಮಗ ದೇಶಾಂತರ ಹೋಗಲು ಕಾರಣವೇನೆಂದರೆ; ತನ್ನ ತಂಗಿಯೊಡನೆ ಸುರಹೊನ್ನೆಯ ತೋಟಕ್ಕೆ ಹೋಗಿದ್ದ, ತನ್ನ ಪ್ರೀತಿಯ ಮಡದಿಯು ಹಿಂದಿರುಗಿ ಬರದಿದ್ದರಿಂದ ದೊರೆಯ ಮಗನು ಬೇಸರಗೊಂಡನು. ಅವನಿಗೆ ಅವನ ಹೆಂಡತಿಯು ತನ್ನ

ತಂಗಿಯೊಡನೆ ಸುರಹೊನ್ನೆಯ ತೋಟದಿಂದ ಹಿಂದಿರುಗಿ ಬಾರದಿರುವುದಕ್ಕೆ ಕಾರಣವಾದ ನಿಜಸಂಗತಿಯು ತಿಳಿಯಲಿಲ್ಲ. ಇದರಿಂದ ಬೇಜಾರಾಗಿ ಗೋಸಾಯಿ ಧಿರಿಸ್ಸನ್ನು ಧರಿಸಿ, ದೇಶಾಂತರಕ್ಕೆ ಹೊರಟು ಹೋದನು.

**17. ತನ್ನ ಆಶ್ರಮಕ್ಕೆ ಬಂದ ಅತಿಥಿಗಳನ್ನು ಅರಣ್ಯಕನು ಹೇಗೆ ಸತ್ಕರಿಸಿದನು?**
ಅರಣ್ಯಕನು ತನ್ನ ಆಶ್ರಮಕ್ಕೆ ಬಂದ ಶತ್ರುಘ್ನ ಮತ್ತು ಪರಿವಾರದವರನ್ನು ಗೌರವದಿಂದ ಬರಮಾಡಿಕೊಂಡು, ಕೈ ಕಾಲುಗಳಿಗೆ ನೀರನ್ನು ಕೊಟ್ಟು, ಕುಳ್ಳಿರಿಸಿದನು. ನಂತರ ಅವನು ಅವರೆಲ್ಲರಿಗೂ ಸವಿಯಾದ ಊಟವನ್ನು ನೀಡಿ, ಆತ್ಮೀಯವಾಗಿ ಸತ್ಕರಿಸಿ ಶ್ರೀರಾಮ ಸತ್ಕಥಾ ವಿನೋದ ಗೋಷ್ಠಿಯನ್ನು ನಡೆಸಿಕೊಟ್ಟನು.

**18. ಕೋಗಿಲೆಯ ಗಾನಕ್ಕೆ ಪ್ರಕೃತಿಯು ಹೇಗೆ ಸ್ಪಂದಿಸಿತು?**
ಕೋಗಿಲೆಯ "ಕುಹೂ! ಕುಹೂ!" ಧ್ವನಿಯನ್ನು ಕೇಳಿ ಜಗವು ಜುಂ ಎಂದಿತು. ಕೋಗಿಲೆಯ ಧ್ವನಿಯನ್ನು ಕೇಳಿ ನೀರವ ಪರ್ವತ ಕಾನನ ಶ್ರೇಣಿಯು ಮುದವನ್ನು ತಾಳಿ ಮರುದನಿ ಮಾಡಿತು. ಕೋಗಿಲೆಯ ಗಾನವನ್ನು ಕೇಳಿ ಗಗನವು ಸುಮ್ಮನೆ ಮಾತನಾಡದೆ ಬಣ್ಣಿಸುತ್ತಿತ್ತು. ಕಣಿವೆಯಲ್ಲಿದ್ದ ಸರೋವರ ಕೋಗಿಲೆಯ ಗಾನಕ್ಕೆ ತೆರೆಗಳ ಮೂಲಕ ಚಪ್ಪಾಳೆಯನ್ನು ತಟ್ಟಿತು. ಕೋಗಿಲೆಯು ತನ್ನ ಮಧುರವಾದ ಧ್ವನಿಗೆ ತನ್ನನ್ನು ತಾನೇ ಮರೆಯುತ 'ಕುಹೂ! ಕುಹೂ!' ಎಂದು ಹಾಡಿತು. ಹೀಗೆ ಕೋಗಿಲೆಯ ಗಾನಕ್ಕೆ ಪ್ರಕೃತಿಯು ಸ್ಪಂದಿಸಿತು.

**19. ಹೊಸನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?**
ಉತ್ಸಾಹ ಉದ್ವೇಗ ಉದ್ರೇಕಗಳ ವೀರ ಯುವಜನರೇ ನಾಡ ಬಾವುಟವು. ಆ ಬಾವುಟದ ಹಾರಾಟಕ್ಕೆ ಆಕಾಶವೇ ಗಡಿ. ಅದರ ಹಾರಾಟವನ್ನು ತಡೆಯುವಂತಹ ಯಾವುದೇ ಶಕ್ತಿಯನ್ನು ಬರಲು ಬಿಡುವುದಿಲ್ಲ. ಅದನ್ನು ತಡೆಯುವ ಶಕ್ತಿ ಉಳ್ಳವರು, ಅದನ್ನು ಹೊಡೆಯುವ ಸಾಮರ್ಥ್ಯ ಉಳ್ಳವರು ಯಾರಾದರೂ ಸಹ ಬನ್ನಿರಿ. ಕೆಡೆ ನುಡಿಯುವ, ಕೆಡೆ ಬಗೆಯುವ ಕೆಡಕು ಜನರೇ ಬನ್ನಿರಿ ನಿಮಗಿದೋ ಹೋರಾಟದ ವೀಳೆಯವನು ಕೊಡುತ್ತಿರುವೆವು. ನಿಮ್ಮೆಲ್ಲರನ್ನು ನಾಶಮಾಡಿ, ನಿಮ್ಮ ಮಸಣದ ಮೇಲೆ ಭವ್ಯವಾದ ಸುಖದ ನಾಡೊಂದನ್ನು ಕಟ್ಟುತ್ತೇವೆ ಎಂದು ಕವಿಯು ಹೇಳುತ್ತಾರೆ.

**20. ತಿಮ್ಮರಾಯನಿಗೆ ಮುದುಕಿಯು ವಿಧಿಸಿದ ಸೀಮೆಗಳನ್ನು ತಿಳಿಸಿ.**
ಮುದುಕಿಯು ತಿಮ್ಮರಾಯನಿಗೆ "ಈ ಕಾಡಿನಲ್ಲಿ ನೀರು, ಹಣ್ಣು ಮತ್ತು ಹಾಲನ್ನು ಕೊಡುವ ಮರಗಳಿವೆ. ಇವುಗಳಿಂದ ನೀನು ನಿನ್ನ ಕುಟುಂಬಕ್ಕೆ ಬೇಕಾದಷ್ಟು ನೀರು, ಹಣ್ಣು ಮತ್ತು ಹಾಲನ್ನು ಪಡೆಯಬಹುದು. ಆದರೆ ಈ ಕಾಡಿನಲ್ಲಿರುವ ನೀರು ಕೊಡುವ ಮರಕ್ಕೆ ಒಂದೇಟಿಗಿಂತ ಹೆಚ್ಚು ಏಟು ಹಾಕಬೇಡ. ಹಣ್ಣು ಕೊಡುವ ಮರವನ್ನು ಕಡಿಯಲೇಬೇಡ ಮತ್ತು ಹಾಲು ಕೊಡುವ ಮರಕ್ಕೆ ಒಂದಕ್ಕಿಂತ ಹೆಚ್ಚು ಏಟು ಹಾಕಬೇಡ. ಈ ಸೀಮೆಯನ್ನು ನೀನು ಮೀರಿದರೆ ನಾಯಿ ಬೊಗಳುತ್ತದೆ. ಆಗ ನನಗೆ ಕೋಪ ಬರುತ್ತದೆ." ಎಂದು ಸೀಮೆಗಳನ್ನು ತಿಳಿಸಿದಳು.

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ. 2*2=4**

**21. "ಅದು ಕಲಾಶ್ರೀ ವಿಹರಿಸುವ ನಂದನವನ"**
**ಆಯ್ಕೆ :–** ಈ ವಾಕ್ಯವನ್ನು **ಶ್ರೀ ಹಿರೇಮಲ್ಲೂರು ಈಶ್ವರನ್** ಅವರು ಬರೆದಿರುವ **'ಕವಿ ಕಂಡ ನಾಡು'** ಎಂಬ ಪ್ರವಾಸ ಕಥನದಿಂದ ಆಯ್ದ **'ತಲಕಾಡಿನ ವೈಭವ'** ಎಂಬ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ :–** "ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುದುವೊಳಲಿನಿಂದ ರನ್ನನು ತಂದೆತಾಯಿಯರಿಗೆ ಹೇಳದೆ; ಬಳೆ ಮಾರುವ ಉದ್ಯಮವನ್ನು ಕೃಷ್ಣಾ ತೀರದ ಮಳಲಿನಲ್ಲಿ ಮುಚ್ಚಿಟ್ಟು; ತಲಕಾಡಿಗೆ ಬಂದನು. ಹಾಗೆ ಬರಲು ಕಾರಣ; ಇಲ್ಲಿನ ಮಣ್ಣಿನಲ್ಲಿದ್ದ ಕಲಾ ಪೋಷಕರಾದ ಚಾವುಂಡರಾಯ ಮತ್ತು ಅತ್ತಿಮಬ್ಬೆ" ಎಂದು ಲೇಖಕರು ಹೇಳುವಾಗ ಈ ಮಾತು ಬಂದಿದೆ.
**ಸ್ವಾರಸ್ಯ :–** "ಅಂದಿನ ಕಾಲಕ್ಕೆ ತಲಕಾಡು ಕಲಾವಿದರಿಗೆ ಆಶ್ರಯ ತಾಣವಾಗಿತ್ತು" ಎನ್ನುವುದನ್ನು ಲೇಖಕರು ಈ ಮಾತಿನ ಮೂಲಕ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾರೆ.

**22. "ನಮ್ಮಯ ದೇಶಕತಿಶಯ ನರೆದಲೆಗ"**
**ಆಯ್ಕೆ :** ಈ ಮಾತನ್ನು **ಶ್ರೀಕನಕದಾಸರು** ರಚಿಸಿರುವ **'ರಾಮಧಾನ್ಯ ಚರಿತೆ'** ಎಂಬ ಕೃತಿಯಿಂದ ಆಯ್ದ **'ರಾಮಧಾನ್ಯ ಚರಿತೆ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :** ಶ್ರೀರಾಮನು ಗೌತಮ ಮುನಿಯ ಆಶ್ರಮದಲ್ಲಿ ವಿವಿಧ ಭಕ್ಷ್ಯಭೋಜ್ಯಗಳಿಂದ ಕೂಡಿದ ಆತಿಥ್ಯವನ್ನು ಸ್ವೀಕರಿಸಿ ತಾನು ಸವಿದ ಧಾನ್ಯಗಳ ಮಹತ್ತ್ವವನ್ನು ತಿಳಿಸಬೇಕೆಂದು ಗೌತಮ ಮುನಿಯನ್ನು ಕೇಳಿಕೊಂಡ ಸಂದರ್ಭದಲ್ಲಿ ಗೌತಮ ಮುನಿಗಳು ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :** ದೇಶದಲ್ಲಿರುವ ಎಲ್ಲ ಧಾನ್ಯಗಳಿಗಿಂತಲೂ ರಾಗಿಯೇ್ಲ ಶ್ರೇಷ್ಠವಾದುದು ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1*2=2**

**23. ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು**
ಇಲ್ಲೆಂಬ ಗಾದೆನುಡಿ ಕೇಳಿರುವೆನು.
ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡ ಕಂಡವರೇನು ಬಲ್ಲರಿದನು.
**ಉಂಡವನು ಕಂಡಿಹನು ಇದರ ಹದನು.**

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. 1*2=2**

**24. ಕಾಯಕದಲ್ಲಿ ನಿರತನಾದಡೆ**
**ಗುರುದರ್ಶನವಾದಡೂ ಮರೆಯಬೇಕು;**
**ಲಿಂಗಪೂಜೆಯಾದಡೂ ಮರೆಯಬೇಕು;**
**ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು;**
**ಕಾಯಕವೇ ಕೈಲಾಸವಾದ ಕಾರಣ**
**ಅಮರೇಶ್ವರ ಲಿಂಗವಯಿತ್ತದಡೂ ಕಾಯಕದೊಳಗು ॥**

ಈ ವಚನವನ್ನು ಶ್ರೀ ಎಂ. ಎಂ. ಕಲಬುರ್ಗಿ ಅವರು ಸಂಪಾದಿಸಿರುವ **'ಸಮಗ್ರ ವಚನ ಸಂಪುಟ'**ದಿಂದ **'ವಚನಾಮೃತ'** ಎಂಬ ಪದ್ಯಪಾಠಕ್ಕಾಗಿ ಆಯ್ದ ಶಿವಶರಣ ಆಯ್ದಕ್ಕಿ ಮಾರಯ್ಯ ಅವರ ವಚನದಿಂದ ಆರಿಸಲಾಗಿದೆ.
ಶಿವಶರಣ ಆಯ್ದಕ್ಕಿ ಮಾರಯ್ಯ ಅವರು "ಕಾಯಕದಲ್ಲಿ ನಿರತವಾದಾಗ ಗುರು, ಲಿಂಗ, ಜಂಗಮ ದರ್ಶನವಾದರೂ ಮರೆಯಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.
"ಕಾಯಕದಲ್ಲಿ ನಿರತವಾದಾಗ ಗುರುದರ್ಶನವಾದರೂ ಮರೆಯಬೇಕು. ಲಿಂಗಪೂಜೆಯನ್ನು ಮಾಡುವುದನ್ನು ಮರೆಯಬೇಕು. ಜಂಗಮರು ಮುಂದೆ ಬಂದರೂ ಅವರ ಹಂಗನ್ನು ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವನ್ನು ಇತ್ತಾದರೂ ಕಾಯಕದಲ್ಲಿ ತಲ್ಲೀನರಾಗಬೇಕು" ಎಂಬುದಾಗಿ ಆಯ್ದಕ್ಕಿ ಮಾರಯ್ಯ ಅವರು ಕಾಯಕದ ಮಹತ್ತ್ವವನ್ನು ನಿರೂಪಿಸಿದ್ದಾರೆ.

**ಕೊಟ್ಟಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ ಸುಮಾರು ಆರು/ಏಳು ವಾಕ್ಯಗಳಲ್ಲಿ ಉತ್ತರಿಸಿರಿ. 1*3=3**

**25. ಮಲೆನಾಡಿನಲ್ಲಿ ಹುಲಿಗಳಿಂದಾಗುತ್ತಿದ್ದ ತೊಂದರೆಗಳನ್ನು ಹೇಗೆ ವರ್ಣಿಸಲಾಗಿದೆ?**
ಮಲೆನಾಡಿನಲ್ಲಿ ಹುಲಿಗಳ ಕಾಟ ಬಹಳ ಇತ್ತು. ಮಲೆನಾಡಿನ ಹಿರಿಯರಿಗೆ ಹುಲಿಯು ದೂರದಲ್ಲಿ ಕೂಗುತ್ತಿದ್ದರೆ ಥಟ್ಟನೆ ತಿಳಿದು ಬಿಡುತ್ತಿತ್ತು. ಹುಲಿಗಳ ಶಬ್ದಕ್ಕೆ ಕೊಟ್ಟಿಗೆಯ ದನಗಳು ಗಡಗಡ ನಡುಗಲು ಆರಂಭಿಸುತ್ತಿದ್ದವು. ಅವುಗಳ ಕೊರಳಿನಲ್ಲಿ ಕಟ್ಟಿದ ಘಂಟೆ ಜೋರು ಶಬ್ದವನ್ನು ಮಾಡುತ್ತಿತ್ತು. ಲೇಖಕರು, ಅವರ ಅಮ್ಮ ಮತ್ತು ಅಜ್ಜ ಚಿಮಣಿಯ ದೀಪದ ಬೆಳಕಿನಲ್ಲಿ ಒಳಗಡೆ ಕುಳಿತು, ಎಲ್ಲಿ ಹುಲಿ ನಮ್ಮ ಕೊಟ್ಟಿಗೆಗೂ ನುಗ್ಗಿಬಿಡುತ್ತದೆಯೋ ಎಂದು ಕಾಯುತ್ತಿದ್ದರು. ಮನೆಗೆ ನಿತ್ಯ ಆಳುಗಳು ಬಂದಾಗ "ಯಾವುದೋ ಹುಲಿ ಯಾವುದೋ ದನವನ್ನು ಕಾಡಿನಲ್ಲಿ ಹಿಡೀತು, ಅವರ ಮನೆ ದನ ಹೋಯಿತು, ಇವರ ಮನೆ ದನ ಹೋಯಿತು" ಎಂದು ಮಾತನಾಡಲು ಶುರುಮಾಡುತ್ತಿದ್ದರು. ಲೇಖಕರಿಗೆ ಆಗ ಹುಲಿ ನಿಜವಾದ ಹಸಿದ ಕಣ್ಣುಗಳ ಕೋರೆದಾಡೆಯ ಮುಖವಾಗಿ ಕಾಣುತ್ತಿತ್ತು. ಲೇಖಕರು ಹುಲಿಯ ಭಯದಿಂದ ಪಾರಾಗಲು ಅವರ ಅಜ್ಜ ಹೇಳಿಕೊಟ್ಟ ಅರ್ಜುನ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು. ಅರ್ಜುನ ಮಂತ್ರವನ್ನು ಹೇಳುತ್ತಾ ನಿದ್ದೆ ಹೋಗುತ್ತಿದ್ದರು. ಅವರ ಅಮ್ಮ ಮಾತ್ರ ನಿದ್ದೆ ಮಾಡುತ್ತಿರಲಿಲ್ಲ. ಬೆಳಿಗ್ಗೆ ಎದ್ದು ಕೊಟ್ಟಿಗೆಯಲ್ಲಿ ಎಲ್ಲ ದನಗಳಿವೆ ಎಂದು ಗೊತ್ತಾದಾಗ ಮನಸ್ಸಿಗೆ ಸಮಾಧಾನವಾಗುತ್ತಿತ್ತು.
**ಅಥವಾ**
**'ಒರಿಜಿನಲ್' ಹಾಗೂ ಚರಟದ ಕಾಫಿಯನ್ನು ಸಿದ್ಧಗೊಲಿಸುತ್ತಿದ್ದ ಬಗೆಯನ್ನು ಬರೆಯಿರಿ.**
ಕಾಫಿಬೀಜವನ್ನು ಆಗಲೇ ಹುರಿದು, ಆಗಲೇ ಪುಡಿ ಮಾಡಿ, ಆಗಲೇ ಕುದಿಯುವ ನೀರಿಗೆ ಬೆರೆಸಿ, ಮುಚ್ಚಿಟ್ಟು, ಅದರ ಗಸಿ ಇಳಿಯುವಷ್ಟು ಹೊತ್ತು ಕಾದು, ಅದಕ್ಕಾಗಿಯೇ ಇದ್ದ ಬಟ್ಟೆಗೆ ಸುರಿದು, ಹಿಂಡಿ, ಡಿಕಾಕ್ಷನ್ ಇಳಿಯುವಾಗ ಕಳೆದುಕೊಂಡ ಉಷ್ಣಾಂಶವನ್ನು ಬಿಸಿಬಿಸಿ ಎಮ್ಮೆ ಹಾಲು ಬೆರೆಸಿ, ಹದಮಾಡಿ, ಮಾಡಿದ ಕಾಫಿಯೇ 'ಒರಿಜಿನಲ್ ಕಾಫಿ' ಒರಿಜಿನಲ್ ಕಾಫಿ ಮಾಡಿ ಉಳಿದ, ಘಮಘಮ ವಾಸನೆಯನ್ನು ಕೊಂಚವಾದರೂ ಉಳಿಸಿಕೊಂಡ ಚರಟವನ್ನು ಕುದಿಸಿ, ಮಾಡಿದ ಕಾಫಿಯೇ ಚರಟದ ಕಾಫಿ.

**ಕೊಟ್ಟಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ ಉತ್ತರಿಸಿರಿ.** **1*4=4**

**26.** **ನಿಮ್ಮನ್ನು ಮೈಸೂರಿನ ಕುವೆಂಪು ನಗರದ ಬಸವಣ್ಣ ಎಂದು ಭಾವಿಸಿಕೊಂಡು. ನಿಮ್ಮ ಬಡಾವಣೆಗೆ ಕುಡಿಯುವ ಶುದ್ಧ ನೀರಿನ ಸೌಲಭ್ಯವನ್ನು ಒದಗಿಸುವಂತೆ ಕೋರಿ ನಗರಪಾಲಿಕೆಯ ಆಯುಕ್ತರಿಗೆ ಮನವಿ ಪತ್ರವನ್ನು ಬರೆಯಿರಿ.**

ಇಂದ

ಬಸವಣ್ಣ<br>ಕುವೆಂಪು ನಗರ<br>ಮೈಸೂರು

ದಿನಾಂಕ : 10–01–2025<br>ಸ್ಥಳ : ಮೈಸೂರು

ಇವರಿಗೆ

ಮಾನ್ಯ ಆಯುಕ್ತರು<br>ಮೈಸೂರು ಮಹಾನಗರಪಾಲಿಕೆ<br>ಮೈಸೂರು

ಮಾನ್ಯರೇ,

ವಿಷಯ : ನಮ್ಮ ಕುವೆಂಪುನಗರ ಬಡಾವಣೆಗೆ ಕುಡಿಯುವ ಶುದ್ಧ ನೀರಿನ ಸೌಲಭ್ಯವನ್ನು ಒದಗಿಸುವಂತೆ ಕೋರಿ ಮನವಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕುವೆಂಪುನಗರ ಬಡಾವಣೆಯಲ್ಲಿ ಸುಮಾರು 6000 ಮನೆಗಳು ಇವೆ. ಇಲ್ಲಿ ಕುಡಿಯುವ ಶುದ್ಧ ನೀರಿಗೆ ತುಂಬಾ ತೊಂದರೆ ಇದೆ. ಜಪಪರ ಕಾಳಜಿ ಇರುವ ತಾವು ದಯಮಾಡಿ ನಮ್ಮ ಬಡಾವಣೆಯಲ್ಲಿ ಒಂದು ಕುಡಿಯುವ ಶುದ್ಧ ನೀರಿನ ಘಟಕವನ್ನು ಸ್ಥಾಪಿಸಿ, ಕುಡಿಯುವ ಶುದ್ಧ ನೀರಿನ ಸೌಲಭ್ಯವನ್ನು ಒದಗಿಸುವಂತೆ ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ಬಂಬಿರುತ್ತೇನೆ.

ವಂದನೆಗಳೊಡನೆ

ತಮ್ಮ ವಿಶ್ವಾಸಿ<br>ಸಹಿ/–<br>(ಬಸವಣ್ಣ)

**ಅಥವಾ**

**ಕೊಟ್ಟಿರುವ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

* **ರಾಷ್ಟ್ರೀಯ ಹಬ್ಬಗಳು**

**ಪ್ರಸ್ತಾವನೆ :–** ದೇಶ ಪ್ರೇಮ ಹಾಗೂ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು ಮಹತ್ತ್ವದ ಸ್ಥಾನವನ್ನು ವಹಿಸುತ್ತವೆ. ರಾಷ್ಟ್ರೀಯ ಹಬ್ಬಗಳು ರಾಷ್ಟ್ರದ ಜನರಲ್ಲಿರುವ ಜಾತಿ, ಮತ, ವರ್ಣ, ಧರ್ಮ, ಭಾಷೆ, ಪ್ರಾಂತ್ಯ ಭೇದಭಾವಗಳನ್ನು ಹೋಗಲಾಡಿಸಿ ನಾವೆಲ್ಲರೂ ಒಂದೇ ಎಂಬ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುತ್ತವೆ. ಆದ್ದರಿಂದ ರಾಷ್ಟ್ರೀಯ ಹಬ್ಬಗಳನ್ನು ಬಹು ವಿಜೃಂಭಣೆಯಿಂದ ಆಚರಿಸಬೇಕು.

**ವಿಷಯ ನಿರೂಪಣೆ :–** ನಮ್ಮ ಭಾರತ ದೇಶದಲ್ಲಿ ಆಗಸ್ಟ್ 15 ರ ಸ್ವಾತಂತ್ರ್ಯೋತ್ಸವ, ಜನವರಿ 26 ರ ಗಣರಾಜ್ಯೋತ್ಸವ, ಅಕ್ಟೋಬರ್ 2 ಮಹಾತ್ಮ ಗಾಂಧೀ ಜಯಂತಿ ಮೊದಲಾದ ದಿನಗಳನ್ನು ರಾಷ್ಟ್ರೀಯ ಹಬ್ಬಗಳು ಎಂದು ಆಚರಿಸಲಾಗುತ್ತದೆ. ರಾಷ್ಟ್ರದಲ್ಲಿ ವಾಸಿಸುವ ಜನರೆಲ್ಲರೂ ಒಗ್ಗೂಡಿ ಆಚರಿಸಬೇಕಾದ ಹಬ್ಬದ ದಿನಗಳಿವು. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ, ರಕ್ಷಣೆಗಾಗಿ, ಏಳಿಗೆಗಾಗಿ ದುಡಿದ ಮಹನೀಯರುಗಳನ್ನು ಸ್ಮರಿಸುವ ದಿನಗಳಿವು. ನಮ್ಮ ಹಿರಿಯರ ತ್ಯಾಗ, ಬಲಿದಾನಗಳ ಮಹತ್ತ್ವವನ್ನು ಅರಿಯುವ ದಿನಗಳಿವು. ಮುಂದಿನ ಜನಾಂಗಕ್ಕೆ ನಮ್ಮ ದೇಶದ ಸಮಗ್ರತೆ ಮತ್ತು ಏಕತೆಯನ್ನು ಕಾಪಾಡುವಂತೆ ದೀಕ್ಷೆ ಕೊಡುವ ದಿನಗಳಿವು. ರಾಷ್ಟ್ರಭಕ್ತರ ಜೀವನ, ಸಾಧನೆಗಳನ್ನು ಮಕ್ಕಳಿಗೆ ತಿಳಿಸಿ ಹೇಳುವ ದಿನಗಳಿವು. ನಮ್ಮ ದೇಶವನ್ನು ಸಂರಕ್ಷಣೆ ಮಾಡುವ ವೀರ ಸೈನಿಕರಿಗೆ ಗೌರವ ಸೂಚಿಸುವ ದಿನಗಳಿವು. ಪ್ರತಿಯೊಬ್ಬ ಭಾರತೀಯನು ಸಂಭ್ರಮದಿಂದ ಭಾಗವಹಿಸಿ ತನ್ನ ದೇಶಪ್ರೇಮವನ್ನು ಜಗತ್ತಿಗೆ ಸಾರುವ ಸುದಿನಗಳಿವು. ರಾಷ್ಟ್ರೀಯ ಹಬ್ಬಗಳು ಶಾಲಾಕಾಲೇಜು, ಸರ್ಕಾರಿ ಕಚೇರಿಗಳಲ್ಲಿ ಮಾತ್ರ ಆಚರಿಸುವ ಹಬ್ಬಗಳಾಗಬಾರದು. ಪ್ರತಿ ಮನೆ, ಗ್ರಾಮ, ಪಟ್ಟಣ, ನಗರಗಳಲ್ಲಿ ಜಾತಿ, ಮತ, ವರ್ಣ, ಧರ್ಮ, ಭಾಷೆ, ಪ್ರಾಂತ್ಯ ಭೇದಭಾವಗಳಿಲ್ಲದೆ ಆಚರಿಸುವ ಪ್ರಮುಖ ಹಬ್ಬವಾಗಬೇಕು. ಆಗ ಮಾತ್ರ ನಾವೆಲ್ಲರೂ ಒಂದೇ ಎಂಬ ರಾಷ್ಟ್ರೀಯ ಭಾವೈಕ್ಯತೆಯು ಮೂಡಲು ಸಾಧ್ಯವಾಗುತ್ತದೆ.

**ಉಪಸಂಹಾರ :–** ಒಂದೆಡೆ ಸೇರಿ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳಬೇಕು. ಪ್ರತಿಯೊಬ್ಬರ ಮನೆ ಮನಗಳಲ್ಲೂ ಹಬ್ಬದ ಸಂಭ್ರಮವಿರಬೇಕು. ನಾವು ಆಚರಿಸುತ್ತಿರುವ ದಿನಗಳ ಮಹತ್ತ್ವದ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಬೇಕು. ನಮ್ಮ ದೇಶದ ಸ್ವತಂತ್ರ ಸೇನಾನಿಗಳ ಬಗ್ಗೆ ಅಭಿಮಾನ ಮೂಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪ್ರತಿ ಮನೆ, ಗ್ರಾಮ, ಪಟ್ಟಣ, ನಗರಗಳಲ್ಲಿ ಇದು ನಮ್ಮ ಹಬ್ಬವೆಂಬ ಸಂಭ್ರಮವಿರಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ.

**ಅಥವಾ**

*** ನಾನು ಮೆಚ್ಚಿದ ಪುಸ್ತಕ**

**ಪ್ರಸ್ತಾವನೆ :–** ಓದುವುದು ಒಂದು ಅತ್ಯುತ್ತಮ ಹವ್ಯಾಸ. ಓದುವುದರಿಂದ ಜ್ಞಾನ ಸಂಪಾದನೆಯ ಜೊತೆಗೆ ಮನಸ್ಸಿಗೆ ಆನಂದವುಂಟಾಗುತ್ತದೆ. ಆದುದರಿಂದ ಉತ್ತಮ ಸಾಹಿತ್ಯ ಕೃತಿಗಳನ್ನು ಓದುವುದು ನನ್ನ ಹವ್ಯಾಸವಾಗಿದೆ.

**ವಿಷಯ ನಿರೂಪಣೆ :–** ನಾನು ಹಲವು ಸಾಹಿತ್ಯ ಕೃತಿಗಳನ್ನು ಓದಿದ್ದೇನೆ. ಆದರೆ ನನಗೆ ಮೆಚ್ಚುಗೆಯಾದ ಪುಸ್ತಕವೆಂದರೆ ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಕನ್ನಡಕ್ಕೆ ಅನುವಾದಿಸಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಆತ್ಮಕಥೆ **'ನನ್ನ ಸತ್ಯಾನ್ವೇಷಣೆ'**. ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಮೂಲಕೃತಿಯ ಪ್ರತಿ ಅಂಶಗಳನ್ನು ಸರಳ ಹಾಗೂ ಸುಂದರ ಶೈಲಿಯಲ್ಲಿ ನಿರೂಪಿಸಿದ್ದಾರೆ. ಈ ಕೃತಿಯಲ್ಲಿ ಗಾಂಧೀಜಿಯವರು ತಮ್ಮ ಜೀವನದಲ್ಲಿ ಸತ್ಯಶೋಧನೆಗಾಗಿ ನಡೆಸಿದ ಪ್ರಯೋಗಗಳನ್ನು ಆತ್ಮಕಥೆಯ ರೂಪದಲ್ಲಿ ವಿವರಿಸಿದ್ದಾರೆ. ಒಬ್ಬ ಸಾಮಾನ್ಯ ವಕೀಲ, ಒಂದು ದೇಶದ ರಾಷ್ಟ್ರಪಿತನ ಪವಿತ್ರ ಸ್ಥಾನದವರೆಗೆ ನಡೆದುಬಂದ ರೀತಿಯನ್ನು ಓದುತ್ತಿದ್ದಂತೆ, ಪೂಜ್ಯ ಗೌರವ ಭಾವನೆಗಳು ಮೈಮನಗಳಲ್ಲಿ ತುಂಬಿಕೊಳ್ಳುತ್ತದೆ. ಈ ಕೃತಿಯನ್ನು ಓದಿದ್ದರಿಂದ ನನಗೆ ಮಹಾತ್ಮನ ಮಹಾನ್ ವ್ಯಕ್ತಿತ್ವದ ಬಗ್ಗೆ ಸಂಪೂರ್ಣವಾಗಿ ಪರಿಚಯವಾಯಿತು.

**ಉಪಸಂಹಾರ :–** ಗಾಂಧೀಜಿಯವರು ತಾವು ಪ್ರತಿಪಾದಿಸಿದ ಸತ್ಯ, ಅಹಿಂಸೆ ಹಾಗೂ ಸರಳಜೀವನವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ನಡೆಸಿದ ಹೋರಾಟ ನಮ್ಮಂತಹವರಿಗೆ ದಾರಿದೀಪವಾಗುವುದರಲ್ಲಿ ಸಂಶಯವಿಲ್ಲ. ಇಂತಹ ಒಂದು ಸುಂದರ ಪುಸ್ತಕವನ್ನು ಓದಿ, ಜ್ಞಾನ ಸಂಪಾದನೆಯ ಜೊತೆಗೆ ಆನಂದವನ್ನು ಪಡೆದೆನು. ಅದ್ದರಿಂದ ನನಗೆ ಈ ಪುಸ್ತಕ ಮೆಚ್ಚುಗೆಯಾಗಿದೆ.